ದಿನಾಂಕ 05-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-</u>

1. ನಾನು ಈ ಕೇಸನ್ನು ಹಾಕಿ 10 ವರ್ಷಗಳಾಯಿತು. ನಿಮ್ಮ ವಾಸದ ಮನೆಯ ಹಿಂದೆ ನೈರುತ್ಯ ಮೂಲೆಯಲ್ಲಿ 1 ನೇ ಆರೋಪಿಯ ಮನೆ ಇದೆ ಎಂದರೆ ಸರಿಯಲ್ಲ. ನಿಮ್ಮ ಮನೆಯ ದಕ್ಷಿಣಕ್ಕೆ ನಿಮ್ಮ ಅಣ್ಣನ ಮನೆ ಇದೆ ಎಂದರೆ ಸಾಕ್ಷಿಯು ಖಾಲಿ ಪ್ಲಾಟ್ ಆದ ನಂತರ ಅಣ್ಣನ ಮನೆ ಇದೆ ಎನ್ನುತ್ತಾರೆ. ನನ್ನ & ನನ್ನ ಅಣ್ಣನ ಮನೆಯ ಮಧ್ಯದಲ್ಲಿ 60 ಅಡಿ ಅಂತರವಿದೆ. ಅದರ ಪಶ್ಚಿಮಕ್ಕೆ ಬಯಲು ಜಾಗ ಇದೆ ಎಂದರೆ ಸರಿ. ಅಲ್ಲಿ ಆರೋಪಿ ವಾಸ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಇಲ್ಲ, ಆತ ಅಲ್ಲಿಲ್ಲ ಎನ್ನುತ್ತಾರೆ. ಆರೋಪಿ ವಾಸ ಮಾಡುವ ಮನೆಯ ಹತ್ತಿರ 15 ಅಡಿ ರಸ್ತೆ ಇದೆ ಎಂದರೆ ಸರಿಯಲ್ಲ.

2. ನನ್ನ ಅಣ್ಣನ ಮನೆಯ ಪಕ್ಕದಲ್ಲಿ ಖಾಲಿ ನಿವೇಶನ ಇದೆ, ಅಲ್ಲಿ ಯಾರೂ ವಾಸಿಸುವುದಿಲ್ಲ. ಸದರಿ ಜಾಗ ಎಂ. ವೆಂಕಟರಾವ್ ರವರ ಆಸ್ತಿ. ನಮ್ಮ ಮನೆಯ ಪಶ್ಚಿಮಕ್ಕೆ ನನ್ನ ಖಾಲಿ ಪ್ಲಾಟ್ ಇದೆ, ನನ್ನ ಅಣ್ಣನ ಮನೆಯ ಪಕ್ಕದಲ್ಲಿ ಬೇರೆಯವರಿಗೆ ಸಂಬಂಧಿಸಿದ ಖಾಲಿ ಪ್ಲಾಟ್ ಇದೆ.

3. ನಮಗೂ & 1 ನೇ ಆರೋಪಿಗೂ ವೈಷಮ್ಯ ಏನು ಎಂದರೆ ಸಾಕ್ಷಿಯು ನಮ್ಮ ಜಾಗದಲ್ಲಿ ದೌರ್ಜನ್ಯ ಮಾಡಿ ಮಣ್ಣು ತೆಗೆದುಕೊಂಡು ಹೋಗಲು ಟ್ರಾಕ್ಟರ್ ತೆಗೆದುಕೊಂಡು ಬಂದಿದ್ದರು ಎನ್ನುತ್ತಾರೆ. ಯಾವ ಕಾರಣಕ್ಕಾಗಿ ಆತ ದೌರ್ಜನ್ಯ ಮಾಡಿದ್ದ ಎಂದರೆ ಸಾಕ್ಷಿಯು ದೌರ್ಜನ್ಯ ಮಾಡಿ ಬಂದಿದ್ದ ಎನ್ನುತ್ತಾರೆ.

4. ನಿಮ್ಮ ಅಣ್ಣ 1 ನೇ ಆರೋಪಿ & ಆತನ ಹೆಂಡತಿಯ ಮೇಲೆ ಒಂದು ಪ್ರಕರಣ ಮಾಡಿದ್ದ ಎಂದರೆ ಸಾಕ್ಷಿಯು 10 ವರ್ಷಗಳ ಹಿಂದೆ ಮಾಡಿದ್ದರು ಎನ್ನುತ್ತಾರೆ. ಸದರಿ ಕೇಸ್ ಮನೆಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ.

5. ದುದ್ದುಪುಡಿ ಮುರಳಿ ತಂದೆ ವೆಂಕಟರಾವ್ ಎಂದರೆ ನಾನೆ. ನಿಮ್ಮ ಅಣ್ಣ ಹಾಕಿದ ಕೇಸಿನಲ್ಲಿ ನೀವು ಸಾಕ್ಷಿ ಸಹ ಹೇಳಿದ್ದೀರಿ ಎಂದರೆ ಸರಿ. ಸದರಿ ಕೇಸನ್ನು 1 ನೇ ಆರೋಪಿರವರ ಮೇಲೆ ನನ್ನ ಅಣ್ಣ ಮಾಡಿದ್ದ. ಸದರಿ ಕೇಸು ನನ್ನ ಅಣ್ಣ ಖಾಲಿ ಪ್ಲಾಟನ್ನು ಮಾರಾಟ ಮಾಡಿದ್ದಾನೆಂದು ಆತ ಹೇಳಿದ್ದ, ನನ್ನ ಅಣ್ಣ ಮಾರಾಟ ಮಾಡಿಲ್ಲ ಎಂದು ಹೇಳಿ ಕೇಸು ಹಾಕಿದ್ದರು.

6. ನಿಮ್ಮ ಅಣ್ಣನ ಮನೆಯ ಪಶ್ಚಿಮಕ್ಕೆ ಇರುವ 15 ಅಡಿ ಜಾಗದ ಸಲುವಾಗಿ ಸದರಿ ಕೇಸು ಆಗಿತ್ತು ಎಂದರೆ ಸರಿಯಲ್ಲ. ಸದರಿ ಮನೆ 61 ರಲ್ಲಿ ಬರುತ್ತದೆ. ಅದು ಎನ್ ಎ ಆಗಿದೆ. ನಮ್ಮ

ಮನೆಯ ಪಕ್ಕದಲ್ಲಿರುವ ಜಾಗ ಎನ್ ಎ ಆಗಿಲ್ಲ. ಸದರಿ ಜಾಗದ ದಕ್ಷಿಣಕ್ಕೆ ನಿಮ್ಮ ಅಣ್ಣನ ಆಸ್ತಿ ಇತ್ತು ಎಂದರೆ ಸಾಕ್ಷಿಯು ಅಣ್ಣನದ್ದಲ್ಲ, ನನ್ನ & ನನ್ನ ಅಣ್ಣನ ಜಂಟಿ ಆಸ್ತಿ ಎನ್ನುತ್ತಾರೆ. ಸದರಿ ಆಸ್ತಿಯ ದಕ್ಷಿಣಕ್ಕೆ ಇದ್ದ ಖಾಲಿ ಜಾಗ ನಿಮ್ಮ ಅಣ್ಣನ ಆಸ್ತಿ ಎಂದರೆ ಸಾಕ್ಷಿಯು ನಮ್ಮ ಜಂಟಿ ಆಸ್ತಿ ಮೂರುಮುಕ್ಕಾಲು ಗುಂಟೆ ಬಿಟ್ಟ ನಂತರ ನನ್ನ ಅಣ್ಣನ ಆಸ್ತಿ ಇದೆ ಎನ್ನುತ್ತಾರೆ. ಸದರಿ ನನ್ನ ಅಣ್ಣನ ಆಸ್ತಿ ಎಷ್ಟು ಗುಂಟೆ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಮೂರುಮುಕ್ಕಾಲು ಗುಂಟೆ ಆಸ್ತಿಯ ದಕ್ಷಿಣಕ್ಕೆ ವಾಸದ ಮನೆ ಇದೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದಂತೆ 1ನೇ ಆರೋಪಿ & ನಿಮ್ಮ ಅಣ್ಣನ ನಡುವೆ ದಾವೆ ಇತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ನಿಮ್ಮ ಅಣ್ಣ 1ನೇ ಆರೋಪಿಗೆ ಮಾರಾಟ ಮಾಡಿದ್ದ, ಅದನ್ನು ಆತ ತನ್ನ ಹೆಂಡತಿಯ ಹೆಸರಿಗೆ ನೊಂದಣಿ ಮಾಡಿಸಿದ್ದ ಎಂದರೆ ನನಗೆ ಮಾಹಿತಿ ಇಲ್ಲ.

7. 1ನೇ ಆರೋಪಿಯ ಮನೆಗೆ ಹೋಗುವ ದಾರಿಯನ್ನು ನೀವು ಮಣ್ಣು ಹಾಕಿ ಬಂದ್ ಮಾಡಿದ್ದರಿಂದ ನಿಮ್ಮ & 1ನೇ ಆರೋಪಿಯ ನಡುವೆ ಬಾಯಿ ಮಾತಿನ ಜಗಳವಾಗಿತ್ತು ಎಂದರೆ ಸರಿಯಲ್ಲ. ನೀವು 1ನೇ ಆರೋಪಿಯ ವಿರುದ್ಧ ಒಂದು ಸಿವಿಲ್ ದಾವೆ ಹಾಕಿದ್ದಿರಿ ಎಂದರೆ ಸರಿ. ಅದರ ಸಂ. 233/2015 ಇರುತ್ತದೆ. ಸದರಿ ದಾವೆ ವಜಾ ಆಗಿತ್ತು. ಅದನ್ನು ಪ್ರಶ್ನಿಸಿ ಮೇಲ್ಮನವಿಯನ್ನು ನೀವು ಸಲ್ಲಿಸಿಲ್ಲ ಎಂದರೆ ಸರಿ. ನೀವು ಕೇಳಿದಂತಹ ಪರಿಹಾರ ಕೊಡಲು ಆಗುವುದಿಲ್ಲ ಎಂದು ನ್ಯಾಯಾಲಯ ತಿರಸ್ಕರಿಸಿ, ಸದರಿ ದಾವೆಯನ್ನು ವಜಾ ಮಾಡಿತ್ತು ಎಂದರೆ ಸರಿಯಲ್ಲ.

8. ನಿಮ್ಮ ಅಣ್ಣ ಮನೆಯ ವಿಚಾರವಾಗಿ ಹಾಕಿದ್ದ ದಾವೆಯೂ ಸಹ ವಜಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

9. ಬೂದಿವಾಳ ಕ್ಯಾಂಪಿನಲ್ಲಿ ಸಿಂಧನೂರು-ಬಳ್ಳಾರಿ ರಾಜ್ಯ ಹೆದ್ದಾರಿ ಪೂರ್ವ-ಪಶ್ಚಿಮಾಭಿಮುಖವಾಗಿದೆ ಎಂದರೆ ಸರಿ. ಬೂದಿವಾಳ ಕ್ಯಾಂಪಿನಲ್ಲಿ ಬಹಳಷ್ಟು ದಾರಿಗಳನ್ನು ರಸ್ತೆಯಿಂದ ಕಾಲುವೆಯವರೆಗೆ ಜಾಗವನ್ನು ಜನರು ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಮನೆ ಕಟ್ಟಿರುವ ಜಾಗ ರಸ್ತೆಗೆ ಹೊಂದಿಕೊಂಡಿದೆ ಎಂದರೆ ಸರಿ. ಆ ದಾರಿಯನ್ನು ನೀವು ಕಬಳಿಸಬೇಕೆಂದು ನೀವು ಪ್ರಯತ್ನಿಸಿದ್ದಿರಿ ಎಂದರೆ ಸರಿಯಲ್ಲ. ಆದ್ದರಿಂದ ನೀವು ಈ ರೀತಿ ಸುಳ್ಳು ದೂರನ್ನು ಆರೋಪಿತರ ವಿರುದ್ಧ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನೀವು ಕೊಟ್ಟಿರುವ ಕೇಸು ಸುಳ್ಳು ಇದೆ ಎಂದರೆ ಸರಿಯಲ್ಲ.

10. ಪೋಲೀಸರು ಮೊದಲು ಬಿ. ಅಂತಿಮ ವರದಿಯನ್ನು ಹಾಕಿದ್ದರು ಎಂದರೆ ಸಾಕ್ಷಿಯು ಹೌದು ಹಾಕಿದ್ದರು, ನಂತರ ನಾನು ಚಾಲೆಂಜ್ ಮಾಡಿದ್ದೆ ಎನ್ನುತ್ತಾರೆ.

11. ನೀವು ಹೇಳುವಂತೆ ಯಾವುದೇ ಘಟನೆ ಆಗಿಲ್ಲ, ನೀವು ಸುಳ್ಳು ಕೇಸು ಹಾಕಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

C/c **2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಸಿಂಧನೂರು.**